**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

**ಮೊಕದ್ದಮೆ ಸಂಖ್ಯೆಃ ಸಿಸಿ 778/2018**

CW-8 PW-7

| | |
|---|---|
| ಸಾಕ್ಷಿಯ ಹೆಸರು | ಡಾಕ್ಟರ ಬಶೀರ ಅಹ್ಮದ ಮತ್ತೆ |
| ತಂದೆಯ ಹೆಸರು | ಅಬ್ದುಲ ರೆಹಮಾನ |
| ವಯಸ್ಸು | 60 ವರ್ಷ |
| ಉದ್ಯೋಗ | ಎಲುವು ಮತ್ತು ಕೀಲು ತಜ್ಞರು, ನಿಮ್ರಾ ಆಸ್ಪತ್ರೆ, ಗೋಕಾಕ |
| ವಾಸಸ್ಥಳ | ಗೋಕಾಕ |

**ಸಾಕ್ಷಿಗೆ ದಿ.09-06-2025 ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅಭಿಯೋಜಕರಿಂದ.**

1. ನಾನು 25 ವರ್ಷಗಳಿಂದ ನಿಮ್ರಾ ಆಸ್ಪತ್ರೆಯಲ್ಲಿ ಎಲುವು ಮತ್ತು ಕೀಲು ತಜ್ಞನೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 23-016-2017 ರಂದು ಮದ್ಯಾಹ್ಞ 1-00 ಗಂಟೆಗೆ ಸಮಯದಲ್ಲಿ ನಾನು ಕರ್ತವ್ಯದಲ್ಲಿರುವಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ 1 ರವರು ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ತಪಾಸಿಸಿದಾಗ ಈ ಕೆಲಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡಭುಜದ ಮೇಲೆ ಬಾವು

2. ಬಲಮೊಣಕಾಲಿನ ಮೇಲೆ ಊತ

3. ಎಡಮೊಣಕಾಲಿನ ಮೇಲೆ ಊತ

4. ಎಡ ತಲೆಯ ಭಾಗದ ಮೇಲೆ ಊತ

5. ಎಡ ಎಡೆಯ ಮೇಲೆ ಊತ

3. ಈ ಮೇಲಿನ 1 ನೇ ಗಾಯವು ತೀವ್ರ ಸ್ವರೂಪದ ಗಾಯವಾಗಿದ್ದು, 2 ರಿಂದ 5 ಗಾಯಗಳು ಸಾಮಾನ್ಯ ಸ್ವರೂಪದ್ದವುಗಳಾಗಿದ್ದವು. ಅವುಗಳು 48 ಗಂಟೆ ಅವಧಿಯಲ್ಲಿ ಸಂಭವಿಸಿದವುಗಳು ಆಗಿದ್ದವು. ಚಾಸಾ 1 ರವರನ್ನು ಒಳರೋಗಿಯಾಗಿ ಚಿಕಿತ್ಸೆ ನೀಡಿ 7 ದಿನದ ನಂತರ ಬಿಡುಗಡೆ ಮಾಡಿರುತ್ತೇನೆ.

4. ಸಾಕ್ಷಿ ಗ್ರಾಯದ ಪ್ರಮಾಣ ಪತ್ರದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4 ಎ ಎಂದು ಗುರುತಿಸಲಾಯಿತು. ಸಾಕ್ಷಿ ಎಮ್ ಎಲ್ ಸಿ ವರದಿ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–5 ಎಂದು ಸಾಕ್ಷಿಯ ಸಹಿಯನ್ನು ನಿಪಿ–5 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಹಿನ್ನೆಲೆಯಲ್ಲಿ ದಾಖಲಾಗುವ ರೋಗಿಯ ಬಗ್ಗೆ ಎಮ್ ಎಲ್ ಸಿ ವರದಿಯನ್ನು ಪೋಲಿಸ ಠಾಣೆಗೆ ನೀಡಿರುತ್ತೇವೆ ಎಂದರೆ ಸರಿ. ನಿಪಿ–5 ನ್ನು ಎರಡು ದಿನ ತಡವಾಗಿ ನೀಡಿರುತ್ತದೆ ಎಂದರೆ ಸರಿ. ನಿಪಿ–5 ನ್ನು ವಿಳಂಬವಾಗಿ ನೀಡಿದ ಕಾರಣವನ್ನು ನಮೂದಿಸಿರುವುದಿಲ್ಲ.

ನಿಪಿ–4 ಮತ್ತು 5 ರ ಜೊತೆ, ಚಾಸಾ 1 ರವರು ಸಾರ್ವಜನಿಕ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದ ಬಗ್ಗೆ ಯಾವುದೇ ದಾಖಲೆಯನ್ನು ಲಗತ್ತಿಸಿಲ್ಲ ಎಂದರೆ ಸರಿ. ಚಾಸಾ 1 ರವರಿಗೆ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ನಿಪಿ–4 ನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

2 ನಿಪಿ–4 ರಲ್ಲಿ ನಮೂದಿಸಿರುವ ಗಾಯಗಳು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬಿರುಸಾದ ನೆಲದ ಮೇಲೆ ಬಿದ್ದಾಗ ಸಂಭವಿಸಬಹುದಾಗ ಗಾಯಗಳಾಗಿರುತ್ತವೆ ಎಂದರೆ ಸರಿ. ಯಾವುದೇ ಅಪಘಾತವಾಗಿರುವುದಿಲ್ಲ, ಚಾಸಾ 1 ರವರಿಗೆ ಯಾವುದೇ ಗಾಯಗಳಾಗಿರದಿದ್ದರೂ ಸಹ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ತಯಾರಿಸಿ ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾ.ದಂ., ಗೋಕಾಕ.